**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

<u>ಸಿ.ಸಿ.ನಂ. **808 /2023**</u>

ದಿನಾಂಕಃ **24.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಶ್ರೀನಿವಾಸ | ಚಾಸಾ-4, ಪ್ರಾಸ.-7 |
| ತಂದೆಯ ಹೆಸರುಃ | ತಿಮ್ಮಪ್ಪ | |
| ವಯಸ್ಸು ಃ | 47 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಯಳ್ಳಂಬಳಸೆ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-1, 3 ಮತ್ತು 5 ರವರು ನನಗೆ ಗೊತ್ತು. ಸುಮಾರು 4 ವರ್ಷಗಳ ಹಿಂದೆ ಸಂಜು ಎಂಬುವವರಿಗೆ ಕಾಮನಕೆರೆ ಗ್ರಂಥಾಲಯದ ಬಳಿ ಅಪಘಾತವಾಗಿದ್ದು, ಈ ವಿಚಾರವಾಗಿ ಮಹಜರ್ ಗೆ ಸಹಕರಿಸುವಂತೆ ಪೋಲಿಸರು ನನಗೆ ಚಾಸಾ-3 ರವರಿಗೆ ಕೋರಿದ್ದು ನಾವುಗಳು ಒಪ್ಪಿ ಸ್ಥಳಕ್ಕೆ ಹೋಗಿದ್ದು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸಂಜೆ 5.00 ರಿಂದ 6.00 ರ ಸಮಯದಲ್ಲಿ ನಿಪಿ-3 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಅದೇ ಸಮಯದಲ್ಲಿ ನಿಪಿ-4 ರಂತೆ ಛಾಯಾಚಿತ್ರ ತೆಗೆಸಿರುತ್ತಾರೆ. ನಂತರ ಬೀರೂರು ಠಾಣೆಗೆ ಹೋಗಿದ್ದು ಅಲ್ಲಿ ಚಾಸಾ-5 ರವರು ಹಾಜರಿದ್ದರು. ಅಲ್ಲಿ ಅಪಘಾತಕ್ಕೊಳಗಾದ ದ್ವಿಚಕ್ರ ವಾಹನಗಳನ್ನು ಪೋಲಿಸರು ಮುಂದಿನ ಕ್ರಮಕ್ಕಾಗಿ ಮಹಜರ್ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-1 ಮತ್ತು 5 ರವರು ಹಾಜರಿದ್ದೆವು. ಮಹಜರನ್ನು ಸಂಜೆ 6.30 ರಿಂದ 7.00 ರವರೆಗೆ ಜರುಗಿಸಿರುತ್ತಾರೆ. ಸಾಕ್ಷಿಯು ನಿಪಿ-2 ರ ನೋಟಿಸಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರ ನೋಟಿಸಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-5 ರ ನೋಟಿಸಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರ ಅಮಾನತ್ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು. ಅಮಾನತ್ ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-7 ಮತ್ತು 8 ರ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 24.10.2022 ರಂದು ಮೃತ ಸಂಜು ರವರಿಗೆ ಅಪಘಾತವಾಗಿದ್ದು ಈ ವಿಚಾರವಾಗಿ ದಿಃ

25.10.2022 ರಂದು ನನಗೆ ಮತ್ತು ಚಾಸಾ-3 ರವರಿಗೆ ನಿಪಿ-2 ರಂತೆ ಸ್ಥಳ ಮಹಜರ್ ಗೆ ಸಹಕರಿಸುವಂತೆ ನೋಟಿಸು ಜಾರಿ ಮಾಡಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸಂಜೆ 5.00 ರಿಂದ 6.00 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಅದೇ ದಿನಾಂಕದಂದು ಸಂಜೆ 6.30 ರಿಂದ 7.30 ರವರೆಗೆ ಬೀರೂರು ಠಾಣಾ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತಕ್ಕೊಳಗಾದ ಕೆಎ-66 ಜೆ-3496 ಹಾಗೂ ಕೆಎ-66 ಎಲ್-0895 ಬೈಕುಗಳನ್ನು ಮುಂದಿನ ಕ್ರಮಕ್ಕಾಗಿ ನಿಪಿ-6 ರ ಮಹಜರ್ ನಂತೆ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ ನಿಪಿ-7 ಮತ್ತು 8 ರಂತೆ ಛಾಯಾಚಿತ್ರ ತೆಗೆಸಿರುತ್ತಾರೆ ಎಂದರೆ ಸರಿ. ಅಪಘಾತವು ಕಾಮನಕೆರೆಯ ಶುದ್ಧ ಗಂಗಾ ನೀರಿನ ಘಟಕದ ಬಳಿ ಆಗಿರುತ್ತದೆ ಎಂದರೆ ಸರಿ.

<u>ಪಾಟೀಸವಾಲುಃ ಶ್ರೀ ಡಿ ಕೆ ಕೆ. ಆರೋಪಿ ಪರ ವಕೀಲರಿಂದಃ</u>

ಮೃತ ಸಂಜು ನನ್ನ ಪರಿಚಯಸ್ಥ ಎಂದರೆ ಸರಿ. ನನ್ನ ವಾಸ ಯಳ್ಳಂಬಳಸೆ ಎಂದರೆ ಸರಿ. ಪೋಲಿಸರು ನನಗೆ 6.00 ಗಂಟೆಗೆ ನೋಟಿಸು ಜಾರಿ ಮಾಡಿರುತ್ತಾರೆ. ಮಹಜರುಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಮತ್ತು ಮೃತ ಸಂಜು ರವರು ವಿಶ್ವಾಸದಿಂದ ಇರುವ ಕಾರಣ ಅವರ ಕುಟುಂಬದವರಿಗೆ ಪರಿಹಾರ ದೊರಕಿಸುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಾಹನಗಳನ್ನು ವಶಪಡಿಸಿಕೊಳ್ಳದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.